ದಿನಾಂಕಃ 01-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಪ್ರಥಮ ಪದವಿ ವ್ಯಾಸಂಗ ಮಾಡಿರುತ್ತೇನೆ. ನನಗೆ 23 ವರ್ಷ ವಯಸ್ಸು. ನಾನು ಬಿ ಎಸ್ ಮಾದಪ್ಪ ಶಾಲೆಯ ಬಳಿ ಕ್ಯಾಂಟಿನ್ ನಡೆಸುತ್ತಿದ್ದೇನೆ. ಸುಮಾರು ಐದು ತಿಂಗಳ ಹಿಂದೆ ಸದರಿ ಕ್ಯಾಂಟಿನ್ ಓಪನ್ ಮಾಡಿರುತ್ತೇನೆ. ನಾನು ಐದು ತಿಂಗಳ ಹಿಂದೆ ವ್ಯಾಸಂಗ ಮಾಡುತ್ತಿದ್ದೆ. ನನ್ನ ತಂದೆ ಕಲ್ಲು ಹೊಡೆಯುವ ಕೆಲಸ ಮಾಡುತ್ತಾರೆ. ಆರೋಪಿ ಚಿಕ್ಕ ವಯಸ್ಸಿನಿಂದಲೂ ಪರಿಚಯ ಇರುತ್ತಾರೆ. ನನ್ನ ತಮ್ಮ ಏನೂ ಕೆಲಸ ಮಾಡುವುದಿಲ್ಲ.

2) ನನ್ನ ತಂದೆ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ, ನನ್ನ ತಂದೆ ಮತ್ತು ನನ್ನ ತಮ್ಮನ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ ಹಾಗೂ ನನ್ನ ತಮ್ಮ ಪೋಲೀಸ್ ಠಾಣೆಯಲ್ಲಿ ಹೇಳಿಕೆಗಳನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ಕೆಲಸಕ್ಕೆ ಹೋಗುತ್ತಿದ್ದು ಸದರಿ ಕೆಲಸದಿಂದ ಬಂದ ಹಣ ಹಾಗೂ ಅಂಗಡಿ ವ್ಯಾಪಾರದಿಂದ ಬಂದ ಹಣ ಮನೆಯಲ್ಲಿ ಇತ್ತು. ನನ್ನ ತಂದೆ ಕೆಲಸಕ್ಕೆ ಹೋಗಿ ಹಣ ಸಂಪಾದನೆ ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ನಮ್ಮ ಕುಟುಂಬದ ಸದಸ್ಯರು ಎಲ್ಲಾ ಸೇರಿ ಹಣವನ್ನು ಮನೆಯಲ್ಲಿ ಇಟ್ಟಿದ್ದೆವು. ನನ್ನ ಬಳಿ ಎರಡು ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ.

3) ಆರೋಪಿ ಜನವರಿ 2025 ರಲ್ಲಿ ಹಣವನ್ನು ಸಾಲವಾಗಿ ಕೇಳಿರುತ್ತಾರೆ. ಆರೋಪಿ ನನ್ನ ಬಳಿ ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನೀಡಿರುವ ಚೆಕ್ಕು ಯಾವ ಕಾರಣಕ್ಕಾಗಿ ಅಮಾನ್ಯಗೊಂಡಿತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ

ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಸದರಿ ಚೀಟಿಯಲ್ಲಿ ಭಾಗಿಯಾಗಿದ್ದರು ಎಂದರೆ ಸರಿಯಲ್ಲ. ಆರೋಪಿ ಚೀಟಿ ಹಣ 51 ಸಾವಿರ ಹಣವನ್ನು ಸಂಪೂರ್ಣವಾಗಿ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಬಿ ಪಿ ಎಲ್ ಪಡಿತರ ಚೀಟಿ ಇದೆ. ನನ್ನ ತಂದೆ ಕಲ್ಲು ಹೊಡೆಯುವ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ವಿಚಾರಣೆಗಾಗಿ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ